**ಶ್ರೀ ಟಿ.ಬಿ. ಜಯಚಂದ್ರ** : ಆ 20 ಸಾವಿರವನ್ನು ಬ್ಯಾಂಕ್‌ನಲ್ಲಿ ಇಟ್ಟುಬಿಡಿ. 18 ವರ್ಷಗಳಾದ ಮೇಲೆ ಎಷ್ಟು ಬರುತ್ತದೆ ಲೆಕ್ಕಾ ಹಾಕಿ. ನಿಮ್ಮ ವಿಮಾ ಕಂಪನಿ ಕೊಡುವುದಕ್ಕಿಂತಾ ಜಾಸ್ತಿ ಬರುತ್ತದೆ.

**ಶ್ರೀ ಪಿ.ಎಂ.ನರೇಂದ್ರಸ್ವಾಮಿ** : ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇದರ ಹಣವನ್ನು ಇಡತಕ್ಕದ್ದಲ್ಲ. ವಿಮಾ ಸಂಸ್ಥೆಯಲ್ಲೇ ಹಣವನ್ನು ಇಡತಕ್ಕದ್ದು. 2006–07 ರಲ್ಲಿ ಈ ಕಂಡೀಷನ್ ಆಧಾರದ ಮೇಲೆ ತೆಗೆದುಕೊಂಡಿರುವ ನಿರ್ಣಯ ಇದಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಬ್ಯಾಂಕ್‌ನಲ್ಲಿ ಬರುವ ಬಡ್ಡಿಯ ಆಧಾರದ ಮೇಲೆ, ಮುಂದೆ ಏನಾಗುತ್ತದೆ ಎಂಬುದರ ಮೇಲೆ ನಾವು ನಿರ್ಣಯ ಕೈಗೊಂಡಿಲ್ಲ. ವಿಮಾ ಸಂಸ್ಥೆಯೇ ಇದರಲ್ಲಿ ಒಳಗೊಂಡು ಅದರಲ್ಲೇ ಇಡುಗಂಟನ್ನು ಇಡಬೇಕು ಎಂಬ ನಿರ್ಣಯದ ಅಡಿಯಲ್ಲಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮ ಇದಾಗಿದೆ.

**ಶ್ರೀ ಉಮೇಶ್ ವಿ. ಕತ್ತಿ** : ಇದರಲ್ಲಿ ಆರೋಗ್ಯವೂ ಕವರ್ ಆಗಿರುತ್ತದೆ.

**ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿ ಕೊರೆಯುವುದು**

**112 (1137) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ)** : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 2007–08, 2008–09 ಹಾಗೂ 2009–10ನೇ ಸಾಲಿನಲ್ಲಿ (ಕಳೆದ 3 ವರ್ಷಗಳಲ್ಲಿ) ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ 3 ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಇ) ಈ 3 ವರ್ಷಗಳಲ್ಲಿ ಕೊರೆಯದೇ ಉಳಿಕೆಯಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವರ್ಷ ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಈ) ಈ 3 ವರ್ಷಗಳಲ್ಲಿ ಕೊಳವೆಬಾವಿಗಳನ್ನು ಕೊರೆಯದೆ ಉಳಿಕೆಯಾಗಲು ಕಾರಣಗಳೇನು (ವರ್ಷ ಮತ್ತು ತಾಲ್ಲೂಕುವಾರು ವಿವರ ಗಳನ್ನು ನೀಡುವುದು);

ಉ) ಉಳಿಕೆ ಕೊಳವೆಬಾವಿಗಳನ್ನು ಯಾವಾಗ ಕೊರೆಸಲಾಗುವುದು?

**ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :**

ಅ)

| ವರ್ಷ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|
| 2007–08 | 233 | 159 |
| 2008–09 | 279 | 175 |
| 2009–10 | 133 | 38 |

(ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಆ) ಒಟ್ಟು 756 ಕೊಳವೆಬಾವಿಗಳು.
(ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಇ) ಒಟ್ಟು 523.
(ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಈ) 2007–08ನೇ ಸಾಲಿನಲ್ಲಿ ಮಂಜೂರು ಮಾಡಿದ ಕೊಳವೆ ಬಾವಿಗಳಲ್ಲಿ 14 ಕೊರೆಯಲು ಬಾಕಿ ಇವೆ. 2008–09ನೇ ಸಾಲಿನಲ್ಲಿ 79 ಹಾಗೂ 2009–10ನೇ ಸಾಲಿನಲ್ಲಿ 171 ಕೊರೆಯಲು ಬಾಕಿ ಇವೆ. ಟೆಂಡರ್ ಮಾಡುವ ವಿಧಾನದಲ್ಲಿ ವಿಳಂಬ ಹಾಗೂ ಘಟಕ ವೆಚ್ಚದ ಮಿತಿ ಇತ್ಯಾದಿ ಗಳಿಂದ ಕೆಲವು ಕಡೆ ಕೊಳವೆ ಬಾವಿಗಳನ್ನು ಪೂರ್ಣವಾಗಿ ಕೊರೆಯಲು ಸಾಧ್ಯವಾಗಿಲ್ಲ. ಆದರೆ, ಈಗಾಗಲೇ ಕಾರ್ಯಾದೇಶ ನೀಡಿದ್ದು, ಬಾಕಿಯಿರುವ

ಕೊಳವೆ ಬಾವಿಗಳನ್ನು ಕೊರೆಯಲು ಕ್ರಮ ಜರುಗಿಸಲಾಗುತ್ತಿದೆ. 2009–10ನೇ ಸಾಲಿನಲ್ಲಿ ಆಯ್ಕೆಯಾದ ಕೊಳವೆ ಬಾವಿಗಳನ್ನು ಕೊರೆಯಲು ಕೂಡ ಟೆಂಡರ್ ಕರೆದಿದ್ದು ಅಂತಿಮ ದೆಸೆಯಲ್ಲಿದೆ. ಆದರೂ ಶೇಕಡಾ 25ರಷ್ಟು ಕೊಳವೆ ಬಾವಿಗಳನ್ನು ಹಿಂದಿನ ಟೆಂಡರ್‌ದಾರರಿಂದ ಕೊರೆಯಲು ಕಾರ್ಯಾದೇಶ ಕೂಡ ನೀಡಲಾಗಿದೆ.

ಕೊಳವೆಬಾವಿ ಕೊರೆಯುವ ಕೆಲಸ ಪ್ರಗತಿಯಲ್ಲಿದ್ದು, ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
ಶ್ರೀ ಬಚ್ಚೇಗೌಡ ಕೆ.ಪಿ(ಚಿಕ್ಕಬಳ್ಳಾಪುರ), ವಿಧಾನಸಭೆ ಸದಸ್ಯರು ಇವರ ಪ್ರಶ್ನೆ ಸಂಖ್ಯೆ:1137ಕ್ಕೆ ಉತ್ತರ

ಅನುಬಂಧ

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 2007-08 | | | 2008-09 | | | 2009-10 | | |
|---|---|---|---|---|---|---|---|---|---|---|
| | | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 28 | 28 | 0 | 34 | 25 | 09 | ಆಯ್ಕೆ ಆಗಿಲ್ಲ | 0 | 34 |
| 2 | ಗೌರಿಬಿದನೂರು | 52 | 50 | 2 | 66 | 53 | 13 | ಆಯ್ಕೆ ಆಗಿಲ್ಲ | 0 | 68 |
| 3 | ಚಿಂತಾಮಣಿ | 42 | 44 | 0 | 53 | 51 | 02 | 65 | 0 | 65 |
| 4 | ಶಿಡ್ಲಘಟ್ಟ | 40 | 40 | 0 | 38 | 37 | 01 | 43 | 0 | 43 |
| 5 | ಬಾಗೇಪಲ್ಲಿ | 71 | 59 | 12 | 88 | 89 | 00 | 25 | 0 | 59 |
| ಒಟ್ಟು | | 233 | 221 | 14 | 279 | 255 | 25 | 133 | 0 | 269 |

ಕರ್ನಾಟಕ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

| ಕ್ರ. ಸಂ. | ವಿಧಾನಸಭಾ ಕ್ಷೇತ್ರ | 2007-08 | | | 2008-09 | | | 2009-10 | | |
|---|---|---|---|---|---|---|---|---|---|---|
| | | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ | ಆಯ್ಕೆಗೊಂಡ ಫಲಾನುಭವಿಗಳ ಸಂಖ್ಯೆ | ಕೊರೆದ ಕೊಳವ ಬಾವಿಗಳ ಸಂಖ್ಯೆ | ಕೊರೆಯದೆ ಉಳಿಕೆಯಾದ ಕೊ.ಬಾ.ಗಳ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 20 | 20 | 0 | 21 | 6 | 15 | 0 | 0 | 0 |
| 2 | ಗೌರಿಬಿದನೂರು | 50 | 50 | 0 | 51 | 40 | 11 | 0 | 0 | 0 |
| 3 | ಚಿಂತಾಮಣಿ | 34 | 34 | 0 | 36 | 26 | 10 | 24 | 0 | 24 |
| 4 | ಶಿಡ್ಲಘಟ್ಟ | 20 | 20 | 0 | 22 | 17 | 5 | 14 | 0 | 14 |
| 5 | ಬಾಗೇಪಲ್ಲಿ | 35 | 35 | 0 | 45 | 32 | 13 | 0 | 0 | 0 |
| ಒಟ್ಟು | | 159 | 159 | 0 | 175 | 121 | 54 | 38 | 0 | 38 |

ಪ್ರಶ್ನೆಯ ಸಂಖ್ಯೆ: 112 (1137)

**ಶ್ರೀ ಕೆ.ಪಿ. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಗಂಗಾಕಲ್ಯಾಣ ಯೋಜನೆಯ ಬಗ್ಗೆ ಬಜೆಟ್‌ನಲ್ಲಿ ಸಹ ಸಾಕಷ್ಟು ಚರ್ಚೆಯಾಗಿದೆ. ಇವರು ಹೇಳುವ ಪ್ರಕಾರವೇ ಶೇಕಡ 50 ರಷ್ಟು ಕೊಳವೆ ಬಾವಿಗಳು ಕೊರೆದಿಲ್ಲ. ಆದ್ದರಿಂದ ಪ್ರಗತಿ ಎಷ್ಟರಮಟ್ಟಿಗೆ ಇದೆ ಎನ್ನುವುದು ಅರ್ಥವಾಗುತ್ತದೆ. ನನ್ನ ಜಿಲ್ಲೆಯ ಮಟ್ಟಿಗೆ ಪ್ರಶ್ನೆಯನ್ನು ಕೇಳಿದ್ದೆ, ನನ್ನ ಜಿಲ್ಲೆಯಲ್ಲಿ ಒಟ್ಟು 1017 ಕೊಳವೆ ಬಾವಿಗಳು ಕಳೆದ 2007–08, 2008–09, 2009–10ನೇ ಸಾಲಿನಲ್ಲಿ ಮಂಜೂರಾಗಿದ್ದರೂ ಅವರು ಕೊಟ್ಟಿರುವ ವರದಿಯ ಪ್ರಕಾರವೇ 523 ಕೊಳವೆ ಬಾವಿಗಳು ಇನ್ನೂ ಕೊರೆಯುವುದು ಬಾಕಿ ಇದೆಯೆಂದು ಹೇಳಿದ್ದಾರೆ. ಪ್ರಗತಿಯಲ್ಲಿ ಶೇಕಡ 50 ರಷ್ಟನ್ನೂ ಕೊರೆದಿಲ್ಲ. ಕಳೆದ ಸಾಲಿನಲ್ಲಂತೂ ಕೊಳವೆ ಬಾವಿಗಳನ್ನು ಕೊರೆದೇ ಇಲ್ಲ. 2009–10ನೇ ಸಾಲಿನ ವರ್ಷ ಮುಗಿಯುತ್ತಾ ಬಂದಿದೆ ಇದುವರೆಗೆ ಒಂದೆ ಒಂದು ಕೊಳವೆ ಬಾವಿಯನ್ನು ಕೊರೆಸುವ ಪ್ರಯತ್ನವಾಗಿಲ್ಲ. ಜೊತೆಗೆ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ವಿಳಂಬವಾಗುತ್ತಿದೆ. ಕೆಲವು ಘಟಕ ವೆಚ್ಚ ಕಡಿಮೆ ಇರುವುದರಿಂದ ಕೊಳವೆ ಬಾವಿಗಳನ್ನು ಅರ್ಧಬರ್ಧ ಕೊರೆದು ಅದನ್ನು ಅಲ್ಲಿಗೇ ಕೈಬಿಟ್ಟು ಮೋಟರ್ ಪಂಪ್ ಅಳವಡಿಸದೆ ತ್ರಿಶಂಕು ಸ್ಥಿತಿಯಲ್ಲಿ ಆ ರೈತರನ್ನು ಇಟ್ಟಿದ್ದಾರೆ. ದಯವಿಟ್ಟು ಇದಕ್ಕೆ ಸೂಕ್ತವಾದ ಪರಿಹಾರವನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರು ಸೂಚಿಸಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ (ಸಮಾಜ ಕಲ್ಯಾಣ ಇಲಾಖೆಯ ಸಚಿವರ ಪರವಾಗಿ) :** ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೊಳವೆ ಬಾವಿಗಳನ್ನು ಕೊರೆದಿಲ್ಲ ಎನ್ನುವುದನ್ನು ಮಾನ್ಯ ಶಾಸಕರು ಹೇಳಿದರು. ಈ ವರ್ಷ ಇನ್ನೂ ಕೊರೆದಿಲ್ಲ ಎಂಬುದನ್ನೂ ಸಹ ಹೇಳಿದರು. ಏಜೆನ್ಸಿ ಫಿಕ್ಸ್ ಆಗುವುದರಲ್ಲಿ ಸ್ವಲ್ಪ ವಿಳಂಬವಾಗಿತ್ತು. ಆ ಕಾರಣದಿಂದಾಗಿ ಕೊರೆಯುವುದು ಸ್ವಲ್ಪ ಲೇಟ್ ಆಗಿದೆ. ಈಗಾಗಲೇ Work order ಕೊಟ್ಟಿದ್ದೇವೆ. Contractor ಜೊತೆಗೆ agreement ಸಹ ಮಾಡಿಕೊಂಡಿದ್ದೇವೆ. ಈಗ Progress ಆಗುತ್ತಿದೆ. ಕೊಳವೆ ಬಾವಿಗಳನ್ನು ಈಗ ಕೊರೆಯಲಾಗುತ್ತಿದೆ. ವಿದ್ಯುತ್ ಸಂಪರ್ಕ ಕಲ್ಪಿಸುವುದರಲ್ಲಿ ಸ್ವಲ್ಪ ವಿಳಂಬವಾಗಿದೆ ಎನ್ನತಕ್ಕದ್ದು ನಿಜ. ವಿದ್ಯುತ್ ಸಂಪರ್ಕ ಕಲ್ಪಿಸುವುದರಲ್ಲಿ ವಿಳಂಬವಾಗಿರುವುದನ್ನು ಕೂಡಲೇ ಮಾಡಬೇಕೆಂದು ಅಧಿಕಾರಿಗಳಿಗೆ

ಸೂಚನೆಯನ್ನು ಕೊಟ್ಟಿದ್ದೇವೆ. ರೈತರು ಪಂಪ್ ಸೆಟ್ಟುಗಳಿಗಾಗಿ ಏನೊಂದು ಡಿಪಾಸಿಟ್ ಅನ್ನು ಕಟ್ಟಬೇಕಾಗಿತ್ತೋ, ಅದನ್ನೂ ಕೂಡ ಸರ್ಕಾರದಿಂದ ಕಟ್ಟಲಿಕ್ಕೆ ಆದೇಶವನ್ನು ಮಾಡಿದ್ದೇವೆ. ಆದಷ್ಟು ಬೇಗನೆ ಮಾಡಿಕೊಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಟಿ.ಬಿ. ಜಯಚಂದ್ರ :** ಏಜೆನ್ಸಿಯೇ ಇನ್ನೂ ಫಿಕ್ಸ್ ಆಗಿಲ್ಲ. ಕೊಳವೆ ಬಾವಿ ಕೊರೆಸಲಾಗುತ್ತಿದೆ ಎಂದು ನೀವು ಹೇಗೆ ಹೇಳುತ್ತೀರಿ?

**ಶ್ರೀ ಗೋವಿಂದ ಎಂ. ಕಾರಜೋಳ :** ಏಜೆನ್ಸಿ ಫಿಕ್ಸ್ ಆಗಿದೆ. Work order ಕೊಟ್ಟಿದ್ದೇವೆ. ಅವರು ಕೊಳವೆ ಬಾವಿಗಳನ್ನು ಕೊರೆಯುತ್ತಿದ್ದಾರೆ. ತಾವು ಆ ಬಗ್ಗೆ ಚೆಕ್ ಮಾಡಿ ನಾಳೆ ಹೇಳಿ. ನಾಳೆ ಕೂಡ ಅಧಿವೇಶನ ನಡೆಯುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ :** ತಮ್ಮ ಉತ್ತರದಲ್ಲಿ '.....2009–10ನೇ ಸಾಲಿನಲ್ಲಿ ಆಯ್ಕೆಯಾದ ಕೊಳವೆ ಬಾವಿಗಳನ್ನು ಕೊರೆಯಲು ಕೂಡ ಟೆಂಡರ್ ಕರೆದಿದ್ದು, ಅಂತಿಮ ದಿಸೆಯಲ್ಲಿದೆ' ಎಂದು ಹೇಳಿದ್ದೀರಿ.

**ಶ್ರೀ ಗೋವಿಂದ ಎಂ.ಕಾರಜೋಳ :** ಅದು ಆಗಿದೆ ಸಾರ್.

**ಶ್ರೀ ಟಿ.ಬಿ. ಜಯಚಂದ್ರ :** ಆ ಉತ್ತರವನ್ನು ನೀವು ಈಗ ಕೊಡುತ್ತಿದ್ದೀರಿ.

**ಶ್ರೀ ಗೋವಿಂದ ಎಂ. ಕಾರಜೋಳ :** ನಾನು ಹೇಳುತ್ತಿದ್ದೇನೆ, ಈಗ ಅದು ಅಂತಿಮವಾಗಿದೆ. ಈಗ ಕೆಲವು ಕಡೆಗಳಲ್ಲಿ ಪ್ರಾರಂಭ ಮಾಡಿದ್ದೇವೆ.

**ಶ್ರೀ ಟಿ.ಬಿ. ಜಯಚಂದ್ರ :** ತಮ್ಮ ಉತ್ತರದಲ್ಲಿ ಮುಂದುವರೆದು '.....ಆದರೂ ಶೇಕಡಾ 25ರಷ್ಟು ಕೊಳವೆ ಬಾವಿಗಳನ್ನು ಹಿಂದಿನ ಟೆಂಡರ್ ದಾರರಿಂದ ಕೊರೆಯಲು ಕಾರ್ಯಾದೇಶ ಕೂಡ ನೀಡಲಾಗಿದೆ' ಎಂದು ಹೇಳಿದ್ದೀರಿ.

**ಶ್ರೀ ಗೋವಿಂದ ಎಂ.ಕಾರಜೋಳ :** ಈಗ ಏಜೆನ್ಸಿ ಫಿಕ್ಸ್ ಆಗಿದೆ, ಕೊಳವೆ ಬಾವಿಗಳನ್ನು ಕೊರೆಯುತ್ತಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಆಗಿರಲಿಕ್ಕಿಲ್ಲ. ಅಂತಹ ಕಡೆ ಮಾಡಿಕೊಡುತ್ತೇವೆ.

**ಶ್ರೀ ಟಿ.ಬಿ. ಜಯಚಂದ್ರ :** ಕೆಲವು ಜಿಲ್ಲೆಯಲ್ಲಿ, ನಮ್ಮ ಜಿಲ್ಲೆ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲೂ ಇದೇ ಹಣೆಬರಹವಾಗಿದೆ. ಇದು ನೀವು ಪರಿಶಿಷ್ಟ ಜಾತಿ/ಪಂಗಡಕ್ಕೆ ಕೊಡತಕ್ಕಂಥ ವಿಶೇಷವಾದಂತಹ ಗೌರವವಾಗಿದೆ!

**ಶ್ರೀ ಗೋವಿಂದ ಎಂ. ಕಾರಜೋಳ :** ಇಲ್ಲ, ಎಲ್ಲಾ ಅವರಿಗೆ ಕೊಡುತ್ತಿದ್ದೇವೆ.

**ಛೇರ್ಮನ್ :** ಎಲ್ಲಾ ಆಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಡಾ: ಹೆಚ್.ಸಿ. ಮಹಾದೇವಪ್ಪ :** ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಾರಜೋಳ್‌ರವರು Minor Irrigation ನಿಂದ Social Welfare Minister ಆಗಿ ಬದಲಾವಣೆಯಾದರೆ ನಮಗೆ ಸಂತೋಷವಾಗುತ್ತದೆ. Social Welfare Department ನವರು ಕೊಳವೆ ಬಾವಿಗಳನ್ನು ಕೊರೆಯುವುದನ್ನು Priority ಮೇಲೆ ತೆಗೆದುಕೊಳ್ಳಬೇಕು. ನಾವು ಹಿಂದೆ ಇದ್ದಾಗಲೇ ನೀರಾವರಿ, ಶಿಕ್ಷಣ, ಹೌಸಿಂಗ್ – ಇವುಗಳನ್ನು priority ಮೇಲೆ ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಈಗ ಅವರು ಕೊಳವೆ ಬಾವಿ ಕೊರೆಯುವುದಕ್ಕೆ ಏಜೆನ್ಸಿ ಫಿಕ್ಸ್ ಮಾಡಿ, ಅವರೊಂದಿಗೆ agreement ಮಾಡಿಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 13 ಸಾವಿರ ಗಂಗಾ ಕಲ್ಯಾಣ ಕೊಳವೆ ಬಾವಿಗಳಿಗೆ ಒಂದು ವರ್ಷದಿಂದ energize ಮಾಡಿಲ್ಲ. ಸರ್ಕಾರದವರೇ ದುಡ್ಡನ್ನು ಕಟ್ಟಿದ್ದಾರೆ. ಆದರೂ ಒಂದು ವರ್ಷವಾದರೂ 13 ಸಾವಿರ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಈ ವರ್ಷದಲ್ಲಿ ಇನ್ನೂ ಕೊಳವೆ ಬಾವಿಗಳನ್ನು ಕೊರೆದಿಲ್ಲ. ಒಂದು ವರ್ಷದಿಂದ 13 ಸಾವಿರ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿಲ್ಲ. ಇಲಾಖೆಯವರು ದುಡ್ಡು ಕಟ್ಟಿ ಕಾಯುತ್ತಾ ಕುಳಿತ್ತಿದ್ದಾರೆ. ಸರ್ಕಾರ ಈ ತರಹದ ಆಮೆ ಗತಿಯ ಕೆಲಸ ಮಾಡಿದರೆ, ಈ ಕಲ್ಯಾಣ ಕಾರ್ಯಕ್ರಮಗಳು ಆ ಜನರಿಗೆ ಯಾವ ರೀತಿಯಾಗಿ ತಲುಪುತ್ತವೆ? ಅದನ್ನೇ 11ನೇ ಪಂಚವಾರ್ಷಿಕ ಯೋಜನೆ inclusive growth ಮಾಡಬೇಕು ಎಂದು ಹೇಳಿದೆ. ಆದ್ದರಿಂದ, ದಯಮಾಡಿ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತಂದು ಸಮಾಜ ಕಲ್ಯಾಣ ಇಲಾಖೆಯನ್ನು ತಮ್ಮ ಕೈಗೆ ಬರುವಂತೆ ಮಾಡಿಕೊಂಡು, ದಯಮಾಡಿ ಚೆನ್ನಾಗಿ ಕೆಲಸ ಮಾಡಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

**ಶ್ರೀ ಗೋವಿಂದ ಎಂ.ಕಾರಜೋಳ :** ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ, ಹಣ ಕೂಡ ಕೊಟ್ಟಿದ್ದೇವೆ. ಆದಷ್ಟು ಬೇಗನೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಕರೆದು, ವಿದ್ಯುದ್ದೀಕರಣ ಮಾಡಿಸಿಕೊಡುತ್ತೇವೆ.

**ಶ್ರೀ ಕೆ.ಪಿ. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಬರತಕ್ಕಂಥ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಡವರೇನಿದ್ದಾರೆ, ಅವರನ್ನು ತ್ರಿಶಂಕು ಸ್ಥಿತಿಯಲ್ಲಿ ಇಡತಕ್ಕದ್ದು ಬೇಡ. ಏಕೆಂದರೆ, ಅವನು ಒಂದಷ್ಟು ಅನುದಾನ ಬರುತ್ತದೆ, ಉಳಿದಿದ್ದಕ್ಕೆ ಸಾಲ ಮಾಡುತ್ತಾನೆ. ಆ ಯೋಜನೆಗಳು ಎಲ್ಲಿಯೂ ಪೂರ್ಣವಾಗುತ್ತಿಲ್ಲ. ಮತ್ತೊಂದು ವಿಷಯವೇನೆಂದರೆ....

**ಅಧ್ಯಕ್ಷರು :** ಇದು ಪ್ರಶ್ನೋತ್ತರವಾಗಿದೆ. ನೀವು ಎಷ್ಟು ಸಲ clarification ಕೇಳುತ್ತೀರಿ?

**ಶ್ರೀ ಕೆ.ಪಿ.ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, ನಾನೇ ಪ್ರಶ್ನೆ ಕೇಳಿರತಕ್ಕದ್ದು.

**ಅಧ್ಯಕ್ಷರು :** ಇರಬಹುದು.

**ಶ್ರೀ ಕೆ.ಪಿ.ಬಚ್ಚೇಗೌಡ :** ಮಾನ್ಯ ಮಂತ್ರಿಗಳಿಂದ clarification ಕೇಳುತ್ತಿದ್ದೇನೆ.

**ಅಧ್ಯಕ್ಷರು :** ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ clear ಆಗಿ ಹೇಳಿದ್ದಾರೆ.

**ಶ್ರೀ ಕೆ.ಪಿ. ಬಚ್ಚೇಗೌಡ :** ನಾನು ಮಾತನಾಡಲಿಲ್ಲ. ಮಧ್ಯೆ ಮಾನ್ಯ ಮಹಾದೇವಪ್ಪನವರು ಕೇಳಿದ ಉಪ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸುತ್ತಿದ್ದರು. ಆಗ ಸದನದಲ್ಲಿ ತಾವು ಇರಲಿಲ್ಲ.

**ಅಧ್ಯಕ್ಷರು :** ಆಯಿತು, ಕೇಳಿ.

**ಶ್ರೀ ಕೆ.ಪಿ.ಬಚ್ಚೇಗೌಡ :** ಆದ್ದರಿಂದ ಅದನ್ನು ಕೂಡಲೇ ಮುಗಿಸಬೇಕು. ಶೇಕಡ 25 ರ ಬದಲಿಗೆ ಎಲ್ಲಾ ಕೊಳವೆ ಬಾವಿಗಳನ್ನು ಕೂಡಲೇ ಕೊರೆಸಬೇಕು. ಕೊಳವೆ ಬಾವಿಗಳನ್ನು ಕೊರೆಸುವುದರಲ್ಲಿ ತಾರತಮ್ಯವಾಗಿದೆ. ಆ ವರದಿ ಕೂಡ ಈ ಉತ್ತರದಲ್ಲಿದೆ. ಎಲ್ಲಾ ಕ್ಷೇತ್ರಗಳಿಗೂ ಸಮಾನವಾಗಿ ಕೊಳವೆ ಬಾವಿಗಳನ್ನು ಕೊರೆಸಬೇಕೆಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಿಗೆ ಕೇಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, .....

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಈಗ ಸದನದಲ್ಲಿದ್ದಾರೆ. ಅವರು ಸದನದಲ್ಲಿ ರುವಾಗ, ಅವರ ಬದಲು ಬೇರೆಯವರು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡುವುದು ಸರಿಯಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಸುಧಾಕರ್‌ರವರು ಮೇಲ್ಮನೆಯಲ್ಲಿದ್ದ ಕಾರಣ, ಅವರ ಬದಲು ನಾನು ಈ ಪ್ರಶ್ನೆಗೆ ಉತ್ತರಿಸುತ್ತಿದ್ದೆ. ಈಗಾಗಲೇ ಪ್ರಶ್ನೆಗೆ ಉತ್ತರ ನೀಡುವ ಪ್ರಕ್ರಿಯೆ ಅರ್ಧ ಆಗಿರುವುದರಿಂದ, ಈ ಪ್ರಶ್ನೆಗೆ ಪೂರ್ಣವಾಗಿ ನಾನೇ ಉತ್ತರಿಸುತ್ತೇನೆ.

**ಅಧ್ಯಕ್ಷರು :** ಈ ಪ್ರಶ್ನೆಗೆ ಈಗಾಗಲೇ ಅರ್ಧ ಉತ್ತರ ಅವರು ಹೇಳಿರುವುದರಿಂದ, ಅವರೇ ಇನ್ನರ್ಧ ಉತ್ತರವನ್ನೂ ಸಹ ಹೇಳಿಬಿಡುತ್ತಾರೆ. ಮುಂದಿನ ಪ್ರಶ್ನೆಗೆ ಮಾನ್ಯ ಸುಧಾಕರ್‌ರವರೇ ಉತ್ತರಿಸುತ್ತಾರೆ.

**Dr. SHARAN PRAKASH RUDRAPPA PATIL :** How can you answer when the Social Welfare Minister is present in the House?

**Mr. SPEKER :** It can be submitted. Where is the rule? There is no such rule. Please, ಕುಳಿತುಕೊಳ್ಳಿ. You show me the rule. ಸುಮ್ಮನೆ un-necessary don't argue. ಮಾನ್ಯ ಸಚಿವರು ಉತ್ತರ ಹೇಳಿ.

**(ಗೊಂದಲ)**

**Sri QAMARUL ISLAM :** The tradition of this House has to be respected.

**(ಗೊಂದಲ)**

**ಅಧ್ಯಕ್ಷರು :** ತಾವು ಉತ್ತರ ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸುಧಾಕರ್‌ರವರು ಮೇಲ್ಮನೆಯಲ್ಲಿದ್ದರು. ಆದ್ದರಿಂದ ಅವರ ಪರವಾಗಿ ನಾನು ಪ್ರಶ್ನೆಗೆ ಉತ್ತರಿಸಲು ತೆಗೆದುಕೊಂಡಿದ್ದೆ. ಒಟ್ಟಿನಲ್ಲಿ ತಮಗೆ ಸರ್ಕಾರದ ಪರವಾಗಿ ಉತ್ತರ ಬಂದರೆ ಸಾಲದೇ?

**ಅಧ್ಯಕ್ಷರು :** ತಾವೇ ಉತ್ತರ ಹೇಳಿ.

**(ಗೊಂದಲ)**

**ಶ್ರೀ ಟಿ.ಬಿ.ಜಯಚಂದ್ರ :** ನೀವು ಅರ್ಧ ಉತ್ತರ ಹೇಳಿದ್ದೀರಿ. ಉಳಿದ ಅರ್ಧ ಉತ್ತರ ಅವರು ಹೇಳಲಿ.

**ಶ್ರೀ ಗೋವಿಂದ ಎಂ.ಕಾರಜೋಳ :** ಅರ್ಧ ಉತ್ತರ ಇನ್ನೊಬ್ಬರು ಹೇಳುವುದು ಬೇಡ. ಅದನ್ನೂ ನಾನೇ ಹೇಳಿ ಮುಗಿಸಿ ಬಿಡುತ್ತೇನೆ.

**ಅಧ್ಯಕ್ಷರು :** ಮುಂದಿನ ಪ್ರಶ್ನೆಗೆ ಮಾನ್ಯ ಸುಧಾಕರ್‌ರವರೇ ಉತ್ತರ ಹೇಳುತ್ತಾರೆ. ಈಗಾಗಲೇ ಅರ್ಧ ಉತ್ತರ ತಾವೇ ಹೇಳಿರುವುದರಿಂದ, ಉಳಿದ ಉತ್ತರವನ್ನೂ ಸಹ ತಾವೇ ಹೇಳಿ ಮುಗಿಸಿ.

**(ಗೊಂದಲ)**

**Sri QAMARUL ISLAM :** Many borewells are not in working condition.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ :** ನಿಮಗೆ ಅನುಕೂಲವಾಗುವ ರೀತಿಯಲ್ಲೇ ಉತ್ತರ ಹೇಳುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

**ಅಧ್ಯಕ್ಷರು :** ಬೇಗ ಉತ್ತರ ಹೇಳಿ ಮುಗಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಯನ್ನು ಮೊದಲು SC/ST Corporation ವತಿಯಿಂದ ಮಾತ್ರ ಅನುಷ್ಠಾನಗೊಳಿಸುತ್ತಿದ್ದೆವು. ಈಗ ನನ್ನ ಸಣ್ಣ ನೀರಾವರಿ ಇಲಾಖೆಯಿಂದಲೂ ಸಹ ಅನುಷ್ಠಾನಗೊಳಿಸಲು ಪ್ರಾರಂಭ ಮಾಡಿದ್ದೇವೆ. ಎಲ್ಲಿ ಹೆಚ್ಚಿನದಾಗಿ ತಮಗೆ ಆಗಬೇಕಾಗಿದೆಯೋ, ಆ ಬಗ್ಗೆ ನನಗೆ ಪಟ್ಟಿ ಕಳುಹಿಸಿಕೊಡಿ. ಅದು ಯಾವ ದೊಡ್ಡ ಕೆಲಸ? ಅದನ್ನು ನಾನೇ ಮಾಡಿಕೊಡುತ್ತೇನೆ.

**ಶ್ರೀ ಖಮರಲ್ ಇಸ್ಲಾಂ :** ಮಾನ್ಯ ಅಧ್ಯಕ್ಷರೆ,.....

**ಅಧ್ಯಕ್ಷರು :** ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

**Sri QAMARUL ISLAM :** Drilling of borewells have been deayed. What are you going to do?

**ಶ್ರೀ ಗೋವಿಂದ ಎಂ. ಕಾರಜೋಳ :** ಅದನ್ನು ಮಾಡಿಕೊಡುತ್ತೇವೆ.

**ಸಮಾಜ ಕಲ್ಯಾಣ ಇಲಾಖೆಯಲ್ಲಿ ವಸತಿ ನಿಲಯಗಳು**

**111 (1298) ಶ್ರೀ ಸುಭಾಷ. ಆರ್. ಗುತ್ತೇದಾರ್ (ಆಳಂದ) :** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು;